ವಿಷಯ : ಹರಪನಹಳ್ಳಿಯಲ್ಲಿ ಸಹಾಯಕ ಆಯುಕ್ತರ ಕಚೇರಿ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೬೬೨ (೧೦೫೯)

ಶ್ರೀ ಯಂಕಾನಾಯಕ ಬಿ. ಎಚ್. (ಹರಪನಹಳ್ಳಿ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದೆ ಹರಪನಹಳ್ಳಿಯಲ್ಲಿ ಹರಪನಹಳ್ಳಿ ಕೇಂದ್ರವಾಗಿಟ್ಟುಕೊಂಡು ಹಡಗಲಿ, ಕೂಡ್ಲಗಿ, ಹಗರಿ ಬೊಮ್ಮನಹಳ್ಳಿ ಸಹಾಯಕ ಆಯುಕ್ತರ ಕಚೇರಿ ಸ್ಥಾಪಿಸಲು ಸರ್ಕಾರದಲ್ಲಿ ಪ್ರಸ್ತಾಪಿಸಿರುವುದು ನಿಜವಲ್ಲವೆ;

ಆ) ಹಿಂದಿನ ಜಿಲ್ಲಾಧಿಕಾರಿಗಳು ಈ ಬಗ್ಗೆ ಒಂದು ವಿವರವಾದ ವರದಿಯನ್ನು ಸರ್ಕಾರಕ್ಕೆ ಕಳುಹಿಸಿರುವುದು ನಿಜವಲ್ಲವೆ;

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಹರಪನಹಳ್ಳಿ ಕೇಂದ್ರವಾಗಿಟ್ಟುಕೊಂಡು ಹರಪನಹಳ್ಳಿ ಮತ್ತು ಜಗಳೂರು ಉಪ ವಿಭಾಗ ಸ್ಥಾಪಿಸಲು ಶ್ರೀ ಹುಂಡೇಕರ್ ಮತ್ತು ಶ್ರೀ ಗದ್ದಿಗೌಡರ ಸಮಿತಿಗಳು ಶಿಫಾರಸ್ಸು ಮಾಡಿವೆ.

ಆ) ನಿಜ.

ಇ) ಜಿಲ್ಲಾ ಪುನರ್ ವಿಂಗಡಣಾ ಸಮಿತಿಗಳು ಮಾಡಿರುವ ಶಿಫಾರಸ್ಸುಗಳ ಅಧ್ಯಯನ ಮಾಡಲು ಸಚಿವ ಸಂಪುಟ ಉಪಸಮಿತಿಯನ್ನು ರಚಿಸಿದೆ.

ಶ್ರೀ ಬಿ. ಎಚ್. ಯಂಕಾನಾಯಕ :– ಈ ಸಮಿತಿಗಳು ಈ ಬಗ್ಗೆ ಶಿಫಾರಸ್ಸು ಮಾಡಿವೆ ಎಂದು ಹೇಳಿದ್ದೀರಿ. ಹಾಗಿದ್ದರೆ ಇದನ್ನು ಯಾವಾಗ ಜಾರಿಗೆ ತರುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಅಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ ಒಂದು ಕ್ಯಾಬಿನೇಟ್ ಸಬ್ ಕಮಿಟಿ ಮಾಡಿದ್ದೇವೆ. ಹುಂಡೇಕರ್ ಕಮಿಶನ್ ಪ್ರಕಾರ ಯಾವ್ಯಾವ ತಾಲ್ಲೂಕು ಸಬ್‌ಡಿವಿಜನ್ ಆಗಬೇಕು ಅಥವಾ ಯಾವ ಸಬ್ ಡಿವಿಜನ್ ಜಿಲ್ಲೆಯಾಗಬೇಕು ಮತ್ತು ಯಾವ ಹೋಬಳಿ ತಾಲ್ಲೂಕ ಆಗಬೇಕು ಎಂದು ಇದರ ಬಗ್ಗೆ ಏನು ವರದಿಯನ್ನು ಕೊಟ್ಟಿದ್ದಾರೆ. ಅದನ್ನು ಈ ವರ್ಷದಲ್ಲಿ ಇಥವಾ ಮುಂದಿನ ವರ್ಷದಲ್ಲಿ ಎಷ್ಟು ಜಿಲ್ಲೆಗಳನ್ನು ನಾವು ತೆಗೆದು ಕೊಳ್ಳಬಹುದು ಎಂಬುದರ ಬಗ್ಗೆ ಕ್ಯಾಬಿನೇಟ್ ಸಬ್ ಕಮಿಟಿ ಅವರ ರಿಪೋರ್ಟ್ ಬಂದ ಮೇಲೆ ಅಥವಾ ಅವರು ಒಪ್ಪಿಗೆ ಕೊಟ್ಟ ಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಎಚ್. ಯಂಕಾನಾಯಕ :– ಬಹಳ ದಿವಸಗಳಿಂದ ಈ ಬೇಡಿಕೆ ಇತ್ತು. ಆದ್ದರಿಂದ ಇದನ್ನು ಬೇಗ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಆದಷ್ಟು ಬೇಗ ನಾವು ಮಾಡಿಸುವ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಎಸ್. ಆಚಾರ್ :– ಇದು ಹರಪನಹಳ್ಳಿ ವಿಚಾರ ಮಾತ್ರ ಅಲ್ಲ. ಈಗಾಗಲೇ ಮೂರು ಸಮಿತಿಗಳು ಆಗಿ ಸರ್ಕಾರಕ್ಕೆ ರಿಪೋರ್ಟ್‌ಗಳು ಬಂದಿವೆ. ಹಿಂದಿನ ಸರ್ಕಾರ ಮತ್ತು ಈಗಿನ ಸರ್ಕಾರ ಸಹ ಇದು ಪರಿಶೀಲನೆಯಲ್ಲಿದೆ ಎಂದು ಹೇಳುತ್ತಿದ್ದಾರೆ. ಇದರ ಮಧ್ಯೆ ಒಮ್ಮೊಮ್ಮೆ ಬೇರೆ ಕಡೆಯಿಂದ ರಿಪೋರ್ಟ್ ಬರುತ್ತದೆ ಅದೇನೆಂದರೆ ಮಾನ್ಯ ಸಚಿವರು ಬೇರೆ ಕಡೆಗಳಿಗೆ ಹೋದಾಗ ಮತ್ತು ಅವರಿಗೆ ಮನವಿ ಗಳನ್ನು ಕೊಟ್ಟಾಗ ಇಂಥಹ ಕಡೆಯಲ್ಲಿ ಕೂಡಲೇ ಜಿಲ್ಲೆಯನ್ನು ಮಾಡಲಾಗುವದು. ತಾಲೂಕು ಮಾಡಲಾಗುವದು ಎಂದು ಹೇಳುತ್ತಾರೆ. ಆದ್ದರಿಂದ ಇದನ್ನು ಒಂದೊಂದು ಕಡೆ ಮಾತ್ರ ತೆಗೆದುಕೊಳ್ಳುತ್ತೀರೋ ಅಥವಾ ಸಮಗ್ರವಾಗಿ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ಪರಿಶೀಲನೆ ಮಾಡುತ್ತೀರೋ ? ಏಕೆಂದರೆ ಹೀಗೆ ಮಾಡುವುದು ಬಹಳ ಮುಖ್ಯ ಇದೆ. ಇದರ ಬಗ್ಗೆ ಕೇಳುವುದಕ್ಕೆ ನಾನು ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕರ್ನಾಟಕ ರಾಜ್ಯದ ಬಗ್ಗೆಯೇ ಸಮಗ್ರವಾಗಿ ವಿಚಾರ ಮಾಡಿಯೇ ರಿಪೋರ್ಟ್ ಕೊಟ್ಟಿದ್ದಾರೆ. ಇದರಲ್ಲಿ ಎಷ್ಟು ಜಿಲ್ಲೆ ಈ ವರ್ಷ ತೆಗೆದುಕೊಳ್ಳಬೇಕು, ಎಷ್ಟು ಜಿಲ್ಲೆಗಳನ್ನು ಮುಂದಿನ ವರ್ಷ ತೆಗೆದುಕೊಳ್ಳ ಬಹುದು ಎಂಬುದು ನಮ್ಮ ಆರ್ಥಿಕ ಪರಿಸ್ಥಿತಿ ಮೇಲೆ ಅವಲಂಬಿಸಿದೆ. ಈ ವರ್ಷ ಒಂದು ಮಾಡಬಹುದು, ಎರಡು ಮಾಡಬಹುದು ಅಥವಾ ಒಂದೇ ತಾಲೂಕನ್ನು ಡಿಕ್ಲೇರ್ ಮಾಡಬಹುದು ಅದಕ್ಕಾಗಿ ಆ ಸಬ್ ಕಮಿಟಿ ರಿಪೋರ್ಟ್ ಬಂದ ಮೇಲೆ ಎಷ್ಟು ತಾಲ್ಲೂಕು ಮಾಡಬಹುದು. ಎಷ್ಟು ಜಿಲ್ಲೆ ಮಾಡಬಹುದು ಎನ್ನುತಕ್ಕಂಥ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ವಿಷಯ : ಕಾಫಿ ತೋಟದ ಮಾಲೀಕರ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೬೩ (೧೧೪೪೩)

ಶ್ರೀಮತಿ ನೋಟಮ್ಮ (ಮೂಡಿಗೆರೆ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಜನ ಕಾಫಿ ತೋಟದ ಮಾಲೀಕರಿದ್ದಾರೆ ? ಎಷ್ಟೆಷ್ಟು ಎಕರೆ ಕಾಫಿ ತೋಟದ ಒಡೆತನ ಹೊಂದಿದ್ದಾರೆ (ಪಟ್ಟಿ ಕೊಡುವುದು) ?

ಆ) ಇದರಲ್ಲಿ ಎಷ್ಟು ಜನ ಹರಿಜನ-ಗಿರಿಜನರಿದ್ದಾರೆ ? ಇವರುಗಳು ಎಷ್ಟೆಷ್ಟು ಎಕರೆ ಕಾಫಿ ತೋಟದ ಮಾಲೀಕರಾಗಿದ್ದಾರೆ (ಪಟ್ಟಿ ಮಾಡುವುದು) ?

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–